## ಕಳೆದ ಸಂಚಿಕೆಯಲ್ಲಿ



ಪಾದರಿಯಾಗಿ ಯಶಸ್ವಿಯಾಗಿದ್ದ ಅಬ್ರಹಾಮ್ ಗಂಡನಾಗಿ ಅಪಮಾರ್ಗ ಹಿಡಿದಿರುವುದು ನ್ಯಾನ್ಸಿಯ ಮನಸ್ಸನ್ನು ಗಾಸಿಗೊಳಿಸಿತು. ಗಂಡನ ಹಾದರ ಅವಳ ಬದುಕಿನ ನೆಮ್ಮದಿಯನ್ನು ಕಸಿದುಕೊಂಡಿತು. ಕೊನೆಗೊಂದು ದಿನ ರೋಸಿಹೋದ ಆಕೆ, ಗಂಡನ ವಿರುದ್ಧ ಸಿಡಿದೆದ್ದಳು. ತನ್ನನ್ನು ತಾನೇ ಶಿಕ್ಷಿಸಿಕೊಳ್ಳಲು ಮುಂದಾದಳು. ನ್ಯಾನ್ಸಿಯ ಉಗ್ರಾವತಾರ ನೋಡಿ ಕಂಗಾಲಾದ ಅಬ್ರಹಾಮ್, ತಾನು ಮುಂದೆಂದೂ ಅನೈತಿಕ ಮಾರ್ಗದಲ್ಲಿ ನಡೆಯುವುದಿಲ್ಲವೆಂದು ಪತ್ನಿಗೆ ವಾಗ್ದಾನ ಮಾಡಿದ. ಗಂಡನನ್ನು ಕ್ಷಮಿಸುವುದರ ಹೊರತು ನ್ಯಾನ್ಸಿಗೆ ಬೇರೆ ದಾರಿ ಕಾಣಲಿಲ್ಲ. ಸ್ವಾಭಿಮಾನದ ಹೆಣ್ಣಿನಂತೆ ಗಂಡನನ್ನು ಬಿಟ್ಟು ಬಾ ಎನ್ನುವ ಸಹೋದರರ ಮಾತನ್ನು ಕಾರ್ಯರೂಪಕ್ಕೆ ತರುವುದು ಆಕೆಗೆ ಸಾಧ್ಯವಾಗಲಿಲ್ಲ. ಅದೇ ಸಮಯದಲ್ಲಿ ಅಬ್ರಹಾಮ್‌ಗೆ ಕೀನ್ಯಾದಲ್ಲಿ ನೆಲೆಸುವ ಅವಕಾಶ ದೊರೆಯಿತು. ಹೊಸ ದೇಶ, ಹೊಸ ಊರಿನ ಸಂಪರ್ಕ ಗಂಡನ ಚಾಳಿಗಳನ್ನು ಬದಲಿಸಬಹುದೆಂದು ನ್ಯಾನ್ಸಿ ಯೋಚಿಸಿದಳು. ಆಕೆಯ ಬದುಕು ಕೇರಳದಿಂದ ಕೀನ್ಯಾದ ಮೋಮ್ಬಾಸಾಕ್ಕೆ ಬದಲಾಯಿತು.

ಧರ್ಮದ ಆಡಂಬರದ ಮರೆಯಲ್ಲಿ ಇಂಥ ದುರಾಚಾರ... ಹೇ ದೇವ! ಈ ನರಕವಾಸ! ನಾನೇನು ಮಾಡಲಿ, ಎಲ್ಲಿಗೆ ಹೋಗಲಿ ಎಂದು ನನಗೆ ತಿಳಿಯುತ್ತಿರಲಿಲ್ಲ. ನಾನು ರೋದಿಸುತ್ತಿದ್ದೆ. ‘ಛಿ! ನೀವೇನಾಗಿದ್ದೀರಿ? ಧರ್ಮದ ಬಗ್ಗೆ ಮಾತನಾಡುತ್ತೀರಿ, ನಿಮ್ಮಂಥ ಅಧರ್ಮದ ವ್ಯಕ್ತಿ ಬೇರಾರೂ ಇರಲಾರರು. ನೀವು ಮನುಷ್ಯನ ಚರ್ಮದಲ್ಲಿ ಅಡಗಿದ ತೋಳ!’ ಹೀಗೆಂದು ನಾನು ಅಬ್ರಾಹಮ್‌ನನ್ನು ತೀವ್ರವಾಗಿ ಧಿಕ್ಕರಿಸಿ, ಹಳಿಯುತ್ತಿದ್ದೆ. ಒಮ್ಮೊಮ್ಮೆ ಗಂಟಲು ಒತ್ತಿ ಬಂದು, ‘ನೀವು ಬೇಕಾದರೆ ನನ್ನನ್ನು ಸಾಯಿಸಿ, ಆದರೆ ಹೀಗೆ ನನ್ನನ್ನು ಅವಮಾನಿಸಬೇಡಿ. ಇದನ್ನು ಸಹಿಸಲು ನನ್ನಿಂದ ಸಾಧ್ಯವಿಲ್ಲ. ನಾನು ಮಾತ್ರವಲ್ಲ, ಜಗತ್ತಿನ ಯಾವ ಹೆಂಡತಿ ಸಹ ನೀವು ಮಾಡುತ್ತಿರುವುದನ್ನು ಒಪ್ಪುವುದಿಲ್ಲ’ ಎಂದು ಧಿಕ್ಕರಿಸುತ್ತಿದ್ದೆ. ರೋದಿಸುತ್ತಿದ್ದೆ. ನನ್ನೊಂದಿಗೆ ಅಬ್ರಾಹಮ್ ಸಹ ರೋದಿಸುತ್ತಿದ್ದ. ಕಡೆಗೆ ಇದು ಹಾಸ್ಯದ ದೃಶ್ಯವಾಗುತ್ತಿತ್ತು.

ಇದೊಂದು ಕ್ರಮವಾಗಿಯೇ ಮಾರ್ಪಟ್ಟಿತು... ಅವನು ರೋದಿಸುವುದು, ಅಂಗಲಾಚುವುದು, ಕ್ಷಮೆ ಯಾಚಿಸುವುದು. ಬೇರೆ ಹೆಣ್ಣನ್ನು ಕಣ್ಣೆತ್ತಿಯೂ ನೋಡುವುದಿಲ್ಲ ಎಂದು ಮಾತು ಕೊಡುವುದು ನಿರಂತರವಾಗಿ ನಡೆಯುತ್ತಿದ್ದವು. ತನ್ನ ದುರ್ವರ್ತನೆಯನ್ನು ಮುಚ್ಚಿಹಾಕಲು ನನ್ನ ಬಗ್ಗೆ ಪ್ರತ್ಯೇಕ ಸ್ನೇಹವನ್ನು ವ್ಯಕ್ತಪಡಿಸುತ್ತಿದ್ದ. ನನಗೆ ಉಡುಗೊರೆಗಳನ್ನು ಖರೀದಿಸುತ್ತಿದ್ದ. ನಾನು ಮತ್ತೆ ಅವನನ್ನು ಕ್ಷಮಿಸಲು ಪ್ರಯತ್ನಿಸುತ್ತಿದ್ದೆ.

ಹೆಣ್ಣುಬಾಕ ಮನುಷ್ಯ ಸುಳ್ಳುಗಾರ, ವಂಚಕ, ಕಪಟಿಯಾಗಿರುತ್ತಾನೆ; ತನ್ನ ಚಾಲಾಕಿತನದಿಂದ ತನ್ನದನ್ನು ಸಮರ್ಥಿಸಿಕೊಳ್ಳುವಲ್ಲಿ ನಿಪುಣನಾಗಿರುತ್ತಾನೆ. ತನ್ನ ವ್ಯಕ್ತಿತ್ವದ ಆಕರ್ಷಣೆಯಿಂದ ತನ್ನ ಪ್ರಶಂಸಕರನ್ನು ಒಟ್ಟು ಹಾಕುತ್ತಾನೆ. ಇಂಥವರು ತಮ್ಮ ಕೆಲಸದಲ್ಲಿ ಸೋಲುವುದಿಲ್ಲ... ನನ್ನ ಜೀವನದಲ್ಲೂ ಏನೂ ಬದಲಾವಣೆಯಾಗಲಿಲ್ಲ. ರಂಪಾಟ ಮಾತ್ರ ನಡೆಯುತ್ತಿತ್ತು, ರೋದಿಸುವುದು, ನನಗೆ ನಾನೇ ಹೊಡೆದುಕೊಳ್ಳುವುದು ಮುಂದುವರೆಯಿತು. ಅದೊಂದು ದಿನ ಅಬ್ರಾಹಮ್ ನನಗೆ, ‘ನನಗೆ ನನ್ನದೇ ಆದ ಪ್ರತ್ಯೇಕ ಜೀವನವಿದೆ, ಅದರಲ್ಲಿ ನೀನು ಹಸ್ತಕ್ಷೇಪ ಮಾಡಬಾರದು. ಜನ ಭಿನ್ನವಾಗಿರುತ್ತಾರೆ. ನಾನೂ ಸಹ ಭಿನ್ನ. ಅನೇಕ ಯುವಕರು, ಯುವಕರನ್ನು ಪ್ರೀತಿಸುತ್ತಾರೆ. ಅನೇಕ ಯುವತಿಯರು, ಯುವತಿಯರನ್ನು ಪ್ರೀತಿಸುತ್ತಾರೆ. ಸಮಾಜ ಅವರ ಸಂಬಂಧವನ್ನು ಒಪ್ಪಿಕೊಳ್ಳುವುದಿಲ್ಲ. ಆದರೆ ಅವರು ಸಮಾಜದಲ್ಲಿದ್ದಾರೆ. ನೀನು ನನಗೆ ಬೇಕಾದರೆ ಕಾಮುಕ ಅಥವಾ ಕೊಳಕು ಮನುಷ್ಯ ಎಂದು ಹೇಳು, ಮನುಷ್ಯನ ಚರ್ಮದೊಳಗಿರುವ ತೋಳ ಎಂದು ಹೇಳು, ಆದರೆ ನಾನು ಏನಾಗಿರುವೆನೋ, ಅದೇ ಮನುಷ್ಯನಾಗಿರುತ್ತೇನೆ’ ಎಂದ.

ಅಲ್ಲದೆ ಅಬ್ರಾಹಮ್ ನನಗೆ, ‘ನೀನು ಮಾತ್ರ ನನಗೆ ಸಾಕಾಗಲ್ಲ. ನನಗೆ ನಿನ್ನಿಂದ ಸಿಗಬೇಕಾದದ್ದು ಸಿಗುತ್ತದೆ, ನಾನು ನಿನ್ನೊಂದಿಗೆ ದಾಂಪತ್ಯ ಜೀವನವನ್ನಿಟ್ಟುಕೊಳ್ಳಲು ಬಯಸುತ್ತೇನೆ. ಆದರೆ ನನಗೆ ನಿನ್ನಿಂದ ಕಾಮದಲ್ಲಿ ಸಂತೃಪ್ತಿ ಸಿಗುವುದಿಲ್ಲ. ಮನುಷ್ಯನಿಗೆ ಐದು, ಹತ್ತು, ಹದಿನೈದು ಅಥವಾ ಇಪ್ಪತ್ತಕ್ಕಿಂತ ಹೆಚ್ಚು ಮಹಿಳೆಯರಿಂದ ಲೈಂಗಿಕ ಸುಖ ಸಿಗುತ್ತಿರುವಾಗ, ನಾನು ಒಬ್ಬಳೊಂದಿಗೆ ಮಾತ್ರ ಅಂಟಿಕೊಂಡಿರುವುದು ನನಗೆ ತುಂಬಾ ಕಷ್ಟವಾಗುತ್ತದೆ’ ಎಂದೂ ಸ್ಪಷ್ಟವಾಗಿ ಹೇಳಿದ.

ನಾನು ಅಬ್ರಾಹಮ್‌ನನ್ನು ಮೌನದಿಂದ ನೋಡಿದೆ. ನನ್ನ ಪತಿ ನನ್ನನ್ನು ಜೀವಮಾನವಿಡಿ ಪ್ರೀತಿಸುವುದಾಗಿ ಮಾತು ಕೊಟ್ಟಿದ್ದ, ವೈವಾಹಿಕ ವಿಧಿವಿಧಾನಗಳನ್ನು ಒಪ್ಪಿಕೊಂಡಿದ್ದ, ನನಗೊಬ್ಬ ಪುತ್ರನನ್ನು ಕೊಟ್ಟಿದ್ದ. ಇಂಥ ನನ್ನ ಪತಿ ಚರ್ಚ್‌ನ ಪಾದರಿಯಾಗಿದ್ದು, ಧರ್ಮಗುರುವಾಗಿದ್ದ; ಆದರೆ ಬೇರೆ ಹೆಣ್ಣುಗಳೊಂದಿಗೆ ಸಂಭೋಗವನ್ನಿಟ್ಟು ಕೊಂಡಿದ್ದಾನೆ.

‘ನಿಮಗೆ ಕಾಮತೃಪ್ತಿ ಯಾವ ಹೆಣ್ಣಿನಿಂದಲೂ ಸಿಗುವುದಿಲ್ಲ. ಒಬ್ಬಳ ನಂತರ ಇನ್ನೊಬ್ಬಳು, ಅವಳ ನಂತರ ಇನ್ನೊಬ್ಬಳು, ಮತ್ತೊಬ್ಬಳು... ನೀವು ಜೀವಮಾನವಿಡಿ ದಾರಿ ತಪ್ಪಿ ಅಲೆಯುತ್ತೀರಿ. ಕೊನೆಗೆ ಒಬ್ಬರೇ ಉಳಿಯುತ್ತೀರಿ. ಆಗ ನಿಮ್ಮೊಂದಿಗೆ ಹೆಂಡತಿ ಇರುವುದಿಲ್ಲ, ಆ ವೇಶ್ಯೆಯರೂ ಇರುವುದಿಲ್ಲ.’

‘ಹೋ ಹೋ...’ ಎಂದು ನನ್ನನ್ನು ಹಳಿದು, ಕಾಲು ಬಡಿಯುತ್ತಾ ಅಬ್ರಾಹಮ್ ಹೊರಟು ಹೋದ. ಈ ಸಂದರ್ಭದಲ್ಲಿ ನನ್ನ ಒಂದೂ ಮನವಿ ನಡೆಯುವುದಿಲ್ಲವೆಂದು ಅಬ್ರಾಹಮ್ ನನಗೆ ಮನವರಿಕೆ ಮಾಡಿದ್ದ. ನನಗೆ ಒಬ್ಬಳಲ್ಲ, ಅನೇಕ ರಸಭರಿತ ಹೆಣ್ಣುಗಳಿವೆ, ಅವರು ಮುಂದೆಯೂ ಇರುತ್ತಾರೆ, ನೀನು ಹೇಗಿದ್ದೀಯೋ, ಹಾಗೆಯೇ ಇರು; ಇಲ್ಲದಿದ್ದಲ್ಲಿ ಹಾಳಾಗಿ ಹೋಗು ಎಂದು ಅಬ್ರಹಾಮ್ ನನಗೆ ತಿಳಿಯಪಡಿಸಿದ್ದ.

ನಾನು ತುಂಬಾ ದುಃಖಿಯಾದೆ, ನನ್ನನ್ನು ಉದಾಸೀನತೆ ದಟ್ಟವಾಗಿ ಆವರಿಸಿತು. ನಾನು ಸಿಟ್ಟಿನಿಂದ ಕೆಂಡವಾದೆ. ಭಯ ಸಹ ಕಾಡಿತು. ನಾನು ಯಾವ ಹಿಡಿತಕ್ಕೆ ಸಿಲುಕಿದೆ? ದುಃಖ ಹೊತ್ತು ಹೇಗೆ ಬದುಕಲಿ? ನಾನೆಷ್ಟು ಅಸಹಾಯಕಿ? ಅಬ್ರಾಹಮ್‌ಗೆ ಶಿಕ್ಷೆಯಂತೂ ಕೊಡಲಾರೆ, ನನಗೆ ನಾನೇ ಶಿಕ್ಷೆಯನ್ನು ಕೊಟ್ಟು ಕೊಳ್ಳಬಹುದಲ್ಲ... ಸರಿ, ಊಟ ಬಿಟ್ಟೆ. ಹಸಿವೆಯಿಂದ ಮಲಗುತ್ತಿದ್ದೆ. ಸದಾ ಮೌನವಾಗಿರುತ್ತಿದ್ದೆ. ಒಂಟಿಯಾಗಿ ಕೋಣೆಯಲ್ಲಿ ಬಂಧಿಯಾಗಿರುತ್ತಿದ್ದೆ. ತಲೆಗೂದಲುಗಳನ್ನು ಕಿತ್ತುಕೊಳ್ಳುತ್ತಿದ್ದೆ. ಹಿಂದೂ ಮಹಾಸಾಗರದ ತೀರದಲ್ಲಿನ ಬಂಡೆಗಳ ನಡುವೆ ಹೋಗಿ ರೋದಿಸುತ್ತಿದ್ದೆ. ಪ್ರಭು ಯೇಸುವಿನ ಸೇವೆಯನ್ನು ಮಾಡುತ್ತಾ, ಈ ಅಂಧಕಾರದ ಮತ್ತು ಜಿಗುಪ್ಸೆಯ ಜಗತ್ತಿನಿಂದ ನನ್ನನ್ನು ಮತ್ತು ನನ್ನ ಮಗನನ್ನು ಪಾರು ಮಾಡು, ಪರಿವಾರದಿಂದ 2800 ಮೈಲಿ ದೂರದಲ್ಲಿ, ಪರದೇಶದಲ್ಲಿದ್ದೇನೆ, ನನ್ನದೆಲ್ಲವೂ ಕಡಿದುಹೋಗಿದೆ, ಕಡಿದುಹೋದ ತುಂಡುಗಳನ್ನು ಹೆಕ್ಕುವ ಪ್ರಯತ್ನವನ್ನು ಮಾಡುತ್ತಿದ್ದೇನೆ ಎಂದು ಪ್ರಾರ್ಥಿಸುತ್ತಿದ್ದೆ. ಇದ್ದಕ್ಕಿದ್ದಂತೆ ನನಗೆ ಮಲಪ್ಪುರಮ್, ನನ್ನ ತವರು ಮನೆ, ಅಪ್ಪ ಮತ್ತು ನನ್ನ ಸಹೋದರ ನೀಲ್‌ನ ನೆನಪಾಗುತ್ತಿತ್ತು.

ನಾನು ಒಬ್ಬ ತಾಯಿಯಾಗಿದ್ದೆ, ಒಬ್ಬ ಅಧ್ಯಾಪಕಿಯಾಗಿದ್ದೆ. ನನ್ನ ಮಕ್ಕಳು ಮತ್ತು ವಿದ್ಯಾರ್ಥಿಗಳ ಬಗ್ಗೆ ನನ್ನ ಕರ್ತವ್ಯವನ್ನು ನಿಷ್ಠೆಯಿಂದ ಮಾಡಲು ಪ್ರಯತ್ನಿಸುತ್ತಿದ್ದೆ. ನನ್ನ ವೃತ್ತಿಯ ಬಗ್ಗೆ ಬದ್ಧಳಾಗಿರಬೇಕೆಂದು ಬಯಸುತ್ತಿದ್ದೆ. ಯಾರಿಗೂ ಅನ್ಯಾಯವಾಗಬಾರದು ಎಂದು ಎಚ್ಚರ ವಹಿಸುತ್ತಿದ್ದೆ. ಅವರು ಸಹ ನನ್ನ ಗಮನ ಬೇರೆಡೆಗೆ ಹರಿಯಲು ಸಹಾಯಕರಾಗುತ್ತಿದ್ದರು. ನಾನು ಬದುಕಲು ನನಗೆ ಧೈರ್ಯವನ್ನು ಕೊಡುತ್ತಿದ್ದರು.

***

ಯಾವಾಗ, ಎಲ್ಲಿ, ಯಾರೊಂದಿಗೆ ಎಷ್ಟು ಸಮಯವನ್ನು ಕಳೆಯಬೇಕು ಎಂಬುದು ಹಣೆಯಲ್ಲಿ ಬರೆದಿರುತ್ತದೆ ಎಂದು ಅಪ್ಪ ಹೇಳುತ್ತಿದ್ದರು.